ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವುದು ಪ್ರಯೋಜನ ಇಲ್ಲವೆಂದರೆ ನಿಲ್ಲಿಸಿ ಬಿಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಅಡೆಮ್‌ಸ್ಮಿತ್ ಅನ್ನು ಹಿಡಿದುಕೊಂಡು, ಇನ್ನು ಕಾರ್ಲ್‌ಮಾರ್ಕ್ಸ್ ಲೆನಿನ್ , present day ಈಗ ಜ್ಯೋತಿಬಸುಗೆ ಬಂದು, ಬುದ್ಧದೇವ್, ಭಟ್ಟಾಚಾರ್ಯವರೆಗೂ ಇನ್ನೂ ಬರಬೇಕು. ಅವರಿಗೆ ನೀವು 45 ನಿಮಿಷಗಳು ಎಂದರೆ ಹೇಗೆ ?

ಅಧ್ಯಕ್ಷರು : ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಅದಕ್ಕೋಸ್ಕರ ಅವರಿಗೆ ಹೇಳಿದೆ. ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಇನ್ನು 5 ನಿಮಿಷಗಳಲ್ಲಿ ಮುಗಿಸಬೇಕು. ತಾವು ಭಾಷಣ ಪ್ರಾರಂಭ ಮಾಡಿ 45 ನಿಮಿಷಗಳಾಯಿತು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಮಗೆ ಅಷ್ಟು ಅರ್ಜೆಂಟ್ ಇದ್ದರೆ, ನಾನು ನನ್ನ ಮಾತುಗಳನ್ನು ಮುಗಿಸಿ ಕುಳಿತುಕೊಳ್ಳುತ್ತೇನೆ.

Mr. Speaker : O.K. It is your wish. ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡಲಿ ಇವರ ಕಡೆಯಿಂದ ಯಾರೂ ಮಾತನಾಡಿಲ್ಲ.

6) ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ : ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ.

ಶ್ರೀ ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, ನಾವು ಒಂದು ಹದಿನೈದು ನಿಮಿಷಗಳಲ್ಲಿ ಮುಗಿಸುತ್ತೇವೆ.

(ಗೊಂದಲ)

ಅಧ್ಯಕ್ಷರು : ಏನು ಇದು ? ನೀವು ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ ? ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ, ಈಗ ಆಡಳಿತ ಪಕ್ಷದ ಕಡೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ಎಲ್ಲರೂ ದಯಮಾಡಿ ಕುಳಿತುಕೊಳ್ಳಿ ನಿಮಗೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ. ಚಂದ್ರಶೇಖರ್ : ಹತ್ತು ನಿಮಿಷಗಳ ಕಾಲ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಎಂ.ಪಿ. ಪ್ರಕಾಶ್‌ರವರೇ, ಮಾತನಾಡಿ; ದಯಮಾಡಿ ಸಹಕರಿಸಬೇಕು. ಇವತ್ತು ಸಂಜೆ 6 ಗಂಟೆಯವರೆಗೆ ಚರ್ಚೆ ಎಂದು ಇದೆ. ಅದರಲ್ಲಿ ಭಾರತೀಯ ಜನತಾ ಪಕ್ಷಕ್ಕೆ 2 ಗಂಟೆ 50 ನಿಮಿಷ ಬರುತ್ತದೆ. ಕಾಂಗ್ರೆಸ್ ಪಕ್ಷಕ್ಕೆ 2 ಗಂಟೆ 20 ನಿಮಿಷ ಬರುತ್ತದೆ, ಜೆ.ಡಿ.ಎಸ್. ಪಕ್ಷಕ್ಕೆ 2 ಗಂಟೆಗಳು ಬರುತ್ತದೆ, ಜೆ.ಡಿ.ಯು.ಗೆ 10 ನಿಮಿಷ ಬರುತ್ತದೆ, ಇತರೇ ಇಂಡಿಪೆಂಡೆಂಡ್ಸ್‌ಗೆ 40 ನಿಮಿಷಗಳು ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಎಷ್ಟು ಸಮಯ ಇದೆ ?

ಅಧ್ಯಕ್ಷರು : ಹೀಗೆ ಸುಮ್ಮನೆ ಮಾತನಾಡಿದರೆ ಹೇಗೆ ? ಕೆಲವರು ಮಾತನಾಡುತ್ತಾರೆ, ಈಗ ಏನೆಂದರೆ ಸಾಕಷ್ಟು ಜನರು ಮಾತನಾಡಿದ್ದಾರೆ. ಈಗ ಆಡಳಿತ ಪಕ್ಷದ ಕಡೆಯಲ್ಲಿ ಮಾತನಾಡಲಿ, ಆಮೇಲೆ ನಿಮಗೂ ಅವಕಾಶವನ್ನು ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ತಾವು ಜೆ.ಡಿ.ಎಸ್.ಗೆ ಸಮಯವನ್ನು ಹೇಳಿದ್ದೀರಿ ಅದನ್ನು ನಾನು ಒಪ್ಪಿಕೊಂಡೆ, ಕಾಂಗ್ರೇಸ್ ಪಕ್ಷಕ್ಕೆ ಸಮಯ ಹೇಳಿದ್ದೀರಿ. ಅದನ್ನೂ ಒಪ್ಪಿಕೊಂಡೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಾನು ಪ್ರಕಾಶ್ ಅವರನ್ನು ಕರೆದಿದ್ದೇನೆ. ಪ್ರಕಾಶ್ ಅವರೆ, ತಾವು ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದ ವಿಚಾರದ ಬಗ್ಗೆ ಮಾನ್ಯ ರಾಷ್ಟ್ರಪತಿಯವರು, ನಮ್ಮ ಜಂಟಿ ಸದನಕ್ಕೆ . . . .

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ಈ ಕಡೆ ನೋಡುವುದೇ ಇಲ್ಲ. ತಾವು ಲಿಫ್ಟ್, ರೈಟ್ ಆ ಕಡೆಗಳಲ್ಲಿ ನೋಡುತ್ತೀರಿ. ನಮ್ಮ ಕಡೆಗೆ ನೋಡುವುದೇ ಇಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ವೈಜನಾಥ್ ಪಾಟೀಲ್‌ರವರೆ, ಈಗ ಕೆಲವು ಪಕ್ಷಗಳ ಮತಿಯಿಂದ ಪಟ್ಟಿಯನ್ನು ಕೊಟ್ಟಿದ್ದಾರೆ. ಈ ಕಡೆ ಜೆ.ಡಿ.ಎಸ್. ನಿಂದ ಯಾರೂ ಮಾತನಾಡಿಲ್ಲ. ಆದುದರಿಂದ ಪ್ರಥಮವಾಗಿ ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಿರುವುದು. ಅವರು ಮಾತನಾಡಿದ ಮೇಲೆ ತಮಗೂ ಅವಕಾಶವನ್ನು ಕೊಡುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಜೆ.ಡಿ. (ಎಸ್)ಗೆ ಕೊಡಿ, ನಮ್ಮ ಅಬ್‌ಜಕ್ಷನ್ ಇಲ್ಲ. ಆದರೆ ಎಂ.ಪಿ. ಪ್ರಕಾಶ್ ಸಾಹೇಬರಿಗೆ ಯಾವುದರಲ್ಲಿ ಕೊಡುತ್ತಿದ್ದೀರಿ ?

ಅಧ್ಯಕ್ಷರು : ಅವರು ಅವಕಾಶ ಕೇಳಿದ್ದಾರೆ, ಅದಕ್ಕಾಗಿ ಕೊಡುತ್ತಿದ್ದೇನೆ ಸ್ವಾಮಿ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಕಣ್ಣೆದುರಿಗೇ ನಾನು ಸರ್ಕಾರಕ್ಕೆ ಸಪೋರ್ಟ್ ಮಾಡಿದ್ದೇನೆ. ಆದ್ದರಿಂದ, ತಮ್ಮ ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ನಾನು ಜೆ.ಡಿ. (ಎಸ್) ನಿಂದಲೇ ಮಾತನಾಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ,

ಶ್ರೀ ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆಯಿಂದಲೂ ಅವಕಾಶವನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ಮಾನ್ಯ ಚಂದ್ರಶೇಖರ್‌ರವರೇ, ನಿಮ್ಮ ನಾಯಕರು ನಿಮ್ಮ ಹೆಸರನ್ನು ಕೊಟ್ಟಿಲ್ಲ. ಸುಮ್ಮನೆ ನಿಂತುಕೊಂಡು ಏಕೆ ಮಾತನಾಡುತ್ತೀರಿ ? ನಿಮ್ಮ ವಿಪ್ ಯಾರ ಹೆಸರನ್ನು ಕೊಟ್ಟಿರುತ್ತಾರೋ ಅವರಿಗೆ ಅವಕಾಶ ಕೊಡುತ್ತಾ ಹೋಗುತ್ತೇವೆ. ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ. ಚಂದ್ರಶೇಖರ್ : 6 ಗಂಟೆಯ ಮೇಲೆ ಅವರು ಮಾತನಾಡಲಿ.

ಅಧ್ಯಕ್ಷರು : ಕೊಡೋಣ ಕುಳಿತುಕೊಳ್ಳಿ, ನಿಮ್ಮ ಪಕ್ಷದಿಂದ ಈಗಾಗಲೇ ಮೂರ್ನಾಕು ಜನರಿಗೆ ಅವಕಾಶ ಕೊಟ್ಟಿದ್ದೇನೆ. ನಿಮ್ಮ ವಿಪ್ ಯಾರ ಹೆಸರನ್ನು ಕೊಟ್ಟಿದ್ದಾರೋ, ಅವರಿಗೆ ಅವಕಾಶ ಕೊಟ್ಟಿದ್ದೇನೆ. ಸುಮ್ಮನೆ ನೀವು ಅವರಿಗೆ, ಇವರಿಗೆ ಎಂದರೆ ಹೇಗೆ ? ಕುಳಿತುಕೊಳ್ಳಿ.

ಶ್ರೀ ಕೆ. ಚಂದ್ರಶೇಖರ್ : ಅವರು ಹೇಳಿದ್ದಕ್ಕೆಲ್ಲಾ ನೀವು ಕೊಡುತ್ತಾ ಹೋದರೆ ಹೇಗೆ ?

ಶ್ರೀ ನಿ.ಲ. ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೇ, ದಯಮಾಡಿ ನಮಗೆ ಆದ್ಯತೆ ಕೊಡಿ. ನಾವು 11 ಸೂತ್ರಗಳ ಬಗ್ಗೆ ಮಾತನಾಡಬೇಕೆಂದಿದ್ದೇವೆ. 50 ವರ್ಷಗಳ ಹಿಂದಿನದನ್ನು, 30 ವರ್ಷಗಳ ಹಿಂದಿನದನ್ನು ನಾವು ಮಾತನಾಡುವುದಿಲ್ಲ.

ಶ್ರೀ ಕೆ. ಚಂದ್ರಶೇಖರ್ : ನಾವು ರಾಷ್ಟ್ರಪತಿಗಳ ಭಾಷಣದ ಬಗ್ಗೆ ಮಾತನಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ನಿಮಗೆ ಎಷ್ಟು ಹೇಳಿದರೂ ಅರ್ಥವಾಗುವುದಿಲ್ಲ. ಯಾವ ಯಾವ ಪಕ್ಷಗಳಿಗೆ ಎಷ್ಟೆಷ್ಟು ಸಮಯ ನಿಗದಿಯಾಗಿದೆ ಎಂದು ನಾನು ಹೇಳಿದೆ. ಈ ಕಡೆಯಿಂದ ಸಾಕಷ್ಟು ಜನ ಮಾತನಾಡಿದ್ದಾರೆ. ಈಗ ಮೊದಲನೇ ಸಾರಿಗೆ ಮೊದಲನೆಯವರಾಗಿ ಈ ಕಡೆಯಿಂದ ಮಾತನಾಡುತ್ತಿದ್ದಾರೆ. ನಿಮ್ಮ ಲೀಡರ್‌ಗಳು ಅರ್ಥಮಾಡಿಕೊಳ್ಳಬೇಕು. ಎಲ್ಲರೂ ಒಂದು ಗಂಟೆ, ಒಂದು ಗಂಟೆ ಹತ್ತು ನಿಮಿಷ ಹೀಗೆ ಮಾತನಾಡಿದರೆ ಹೊಸಬರಿಗೆ ಅವಕಾಶ ಸಿಗುತ್ತಾದೆಯೇನು ? ನಿಮ್ಮ ಲೀಡರ್‌ಗಳನ್ನು ಕೇಳಿ, ನನ್ನನ್ನೇನು ಕೇಳುತ್ತೀರಿ ?

ಶ್ರೀ ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, ಕಂಟ್ರೋಲ್ ಮಾಡಬೇಕಾದವರು ತಾವು.

ಅಧ್ಯಕ್ಷರು : ಏನು ಮಾಡುವುದಕ್ಕಾಗುತ್ತದೆ ? No. No. This is not correct.

ಶ್ರೀ ಕೆ. ಚಂದ್ರಶೇಖರ್ : ಸಬ್ಜೆಕ್ಟ್ ಬಗ್ಗೆ ಮಾತನಾಡದೇ, ಬೇರೇನೋ ಸಬ್ಜೆಕ್ಟ್ ಮಾತನಾಡುತ್ತಿದ್ದಾರೆ. ನಾವು ಈ ಹನ್ನೊಂದು ಸೂತ್ರಗಳ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ ಸ್ವಾಮಿ, ಅವರನ್ನು ಕರೆದಿದ್ದೇನೆ.

ಶ್ರೀ ಕೆ. ಚಂದ್ರಶೇಖರ್ : ಈ ಹನ್ನೊಂದು ಸೂತ್ರಗಳನ್ನು ಬಿಟ್ಟು ಬೇರೆ ಮಾತನಾಡುವುದಿದ್ದರೆ, ಪ್ರೆಸ್ ಅಥವಾ ಮನೆಯಲ್ಲಿ ಮಾತನಾಡಲಿ.

ಅಧ್ಯಕ್ಷರು : ನೀವು ಈ ರೀತಿ ಮಾತನಾಡಿದರೆ ಸರಿಹೋಗುವುದಿಲ್ಲ. ಈ ರೀತಿ ಮಾತನಾಡಿದರೆ, ಮತ್ತೆ ಮತ್ತೆ ನೀವು ಅಡ್ಡಿ ಮಾಡಿದರೆ ಸರಿಹೋಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಚಂದ್ರಶೇಖರ್ : ಅವರೆಲ್ಲಾ ಮಾತನಾಡಿದರೆ ಅಡ್ಡಿಯಿಲ್ಲ, ನಾವು ಕೇಳಿದರೆ ಅಡ್ಡಿ ಏಕೆ ಹೇಳಿ. ಚುನಾವಣೆ ಗೆಲ್ಲುವಾಗ ಸೀನಿಯರ್, ಜೂನಿಯರ್ ಎಂದು ಹೇಳಿರುತ್ತೀವೆಯೇ? ಚುನಾವಣೆಯಲ್ಲಿ ಓಟು ಹಾಕುವಾಗ, ಸೀನಿಯರ್, ಜೂನಿಯರ್ ಎಂದು ಓಟ್ ಹಾಕಿದ್ದಾರೆಯೇ?

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ಎಂ.ಪಿ. ಪ್ರಕಾಶ್‌ರವರೇ, ನೀವು ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ . . . .

ಶ್ರೀ ಬಸವರಾಜ ರಾಯರೆಡ್ಡಿ : ಮೂರು ದಿವಸದ ಚರ್ಚೆಯನ್ನು ಎರಡು ದಿವಸಗಳಿಗೆ ಇಳಿಸಿದ್ದೀರಿ. ನಾಳೆಯೂ ಕಂಟಿನ್ಯೂ ಮಾಡಿ.

ಶ್ರೀ ಕೆ. ಚಂದ್ರಶೇಖರ್ : ಎಲ್ಲಾ ಸಬ್ಜೆಕ್ಟ್ ಮೇಲೂ ಅವರೆಲ್ಲರೂ ಮಾತನಾಡಬೇಕು. ಪ್ರತಿಸಬ್ಜೆಕ್ಟ್ ಮೇಲೂ ಅವರು ಮಾತನಾಡಬೇಕು ಎಂದರೆ ನಾವೇನು ಮಾತನಾಡುವುದು ?

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ಹೊರಗೆ ಕಳುಹಿಸಬೇಕಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ, ನಾಯಕರುಗಳು ನಿಮ್ಮ ಮೆಂಬರ್ಸ್‌ಗಳನ್ನು ಡಿಸಿಪ್ಲಿನ್ ಮಾಡಿ. ಈ ರೀತಿ ಮಾಡಿದರೆ ಹೇಗೆ ?

ಶ್ರೀ ಕೆ. ಚಂದ್ರಶೇಖರ್ : ಕ್ಷಮಿಸಬೇಕು ಅಧ್ಯಕ್ಷರೇ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ . . . .

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ . . . .

ಅಧ್ಯಕ್ಷರು : ಈ ತರಹ ಮಾಡಿದರೆ ಹೇಗೆ ? ಇದು Unruly behaviour ದಯಮಾಡಿ ಕುಳಿತುಕೊಳ್ಳಿ, ಅವರನ್ನು ಮಾತನಾಡಲು ಕರೆದಿದ್ದೇನೆ. ಅನಂತರ ತಮಗೆ ಅವಕಾಶಕೊಡೋಣ, ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ದಯಮಾಡಿ ಅಧಿವೇಶನವನ್ನು ನಾಳೆಯೂ ಕಂಟಿನ್ಯೂ ಮಾಡಿ.

ಅಧ್ಯಕ್ಷರು : ಅದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಬಿ.ಎ.ಸಿ.ಯಲ್ಲಿ ಆ ರೀತಿ ತೀರ್ಮಾನವಾಗಿದೆ. ಕಂಟಿನ್ಯೂ ಮಾಡಬೇಕೆಂದರೆ, I am ready. ಇಡೀ ಸಭೆ ತೀರ್ಮಾನಿಸಿ, ನಾಳೆಯೂ ನಡೆಸಬೇಕೆಂದರೆ ನನ್ನದೇನೂ ಅಡ್ಡಿಯಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ದಯಮಾಡಿ ಕೇಳಿ, ಮೊದಲಿನ ಅಜೆಂಡಾ ಪ್ರಕಾರ, ನಾಳೆಯೂ ಚರ್ಚೆಯನ್ನು ಮುಂದುವರೆಸಿ, ನಾಳೆ ಸಾಯಂಕಾಲ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಈಗಲೂ ನೀವು ಹಾಗೆ ಮಾಡಬಹುದಲ್ಲಾ. You can decide.

ಅಧ್ಯಕ್ಷರು: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎರಡು ದಿವಸ ಸಾಕು ಎಂದು ತೀರ್ಮಾನ ಮಾಡಿದ್ದಾರೆ. ಅದರ ಪ್ರಕಾರ ನಾನು ಹೇಳಿದೆ. ಅದಕ್ಕಿಂತಲೂ ಈ ಸಭೆಗೆ ಅಧಿಕಾರ ಇದೆ. ಈ ಸಭೆ ನಾಳೆಯೂ ಸಹ ನಡೆಸಬೇಕು ಎಂದು ತೀರ್ಮಾನ ಮಾಡಿದರೆ ಅದಕ್ಕೆ ನನ್ನದೇನೂ ಅಡ್ಡಿಯಿಲ್ಲ.

Sri Basavaraj Rayareddy : Please do it.

ಶ್ರೀ ಕೆ. ಚಂದ್ರಶೇಖರ್ : ಅಧ್ಯಕ್ಷರೇ, ದಯವಿಟ್ಟು ನಾಳೆಯೂ ಸಭೆ ಕರೆಯಲಿಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ನಾಳೆಯೂ ಕಂಟಿನ್ಯೂ ಆಗಲಿ, ಚರ್ಚೆಯಾಗಬೇಕು.

ಡಾ: ಸುಧಾಕರ ರೆಡ್ಡಿ : ನಾಳೆಯೂ ಕಂಟಿನ್ಯೂ ಆಗಲಿ. ದಯವಿಟ್ಟು ತಾವು ಎಲ್ಲಾ ಯುವಜನರಿಗೆ ಅವಕಾಶ ಮಾಡಿಕೊಡಬೇಕು. ನಾಳೆಯೂ ಸಭೆ ಕರೆಯುವ ವ್ಯವಸ್ಥೆ ಮಾಡಿ. ನಾವೆಲ್ಲರೂ ಮಾತನಾಡಲಿಕ್ಕೆ ತಯಾರಿದ್ದೇವೆ.

ಅಧ್ಯಕ್ಷರು : ಈಗ ಕುಳಿತುಕೊಳ್ಳಿ, ಅವರನ್ನು ಮಾತನಾಡುವುದಕ್ಕೆ ಕರೆದಿದ್ದೇವೆ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಕೆ. ಚಂದ್ರಶೇಖರ್ : ಎರಡು ವರ್ಷದಲ್ಲಿ ನಾನು ಇದೇ ಮೊದಲನೇ ಸಲ ಅವಕಾಶ ಕೇಳಿರುವುದು. ಎರಡು ವರ್ಷದಲ್ಲಿ ಮೊದಲನೇ ಸಾರಿ ಮಾತನಾಡುತ್ತೇನೆ ಎಂದು ನಾನು ನಿನ್ನೆಯಿಂದ ಕೇಳುತ್ತಿದ್ದೇನೆ. ನಿಮಗೆ ನಮ್ಮ ಮೇಲೆ ಒಂದು ಸ್ವಲ್ಪ ಪ್ರೀತಿ, ಅನುಕಂಪ ಇಲ್ಲವೇ ಅಧ್ಯಕ್ಷರೇ?

ಅಧ್ಯಕ್ಷರು : ಕುಳಿತುಕೊಳ್ಳಿ ಅಂದರೆ ಮತ್ತೆ ಮತ್ತೆ ನಿಂತು ಮಾತನಾಡುತ್ತೀರಿ. No. No. No.

ಶ್ರೀ ಕೆ. ಚಂದ್ರಶೇಖರ್ : ಎರಡು ವರ್ಷಗಳಲ್ಲಿ ಮೊದಲನೇ ಬಾರಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ಈ ರೀತಿ ಹೇಳುವುದು ಸರಿಯಲ್ಲ. ರೆಸ್ಪೆಕ್ಟೀವ್ ಪಾರ್ಟೀಸ್ ಯಾರ ಪಟ್ಟಿಯನ್ನು ಕೊಡುತ್ತಾರೆ, ನಾವು ಅವರಿಗೆ ಅವಕಾಶ ಕೊಡುತ್ತಾ ಹೋಗುತ್ತೇವೆ. ಏನು ಮಾಡುವುದು ಹೇಳಿ?

7. ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚೆ ಮತ್ತು ಸರ್ಕಾರದ ಪ್ರತಿಕ್ರಿಯೆ(ಮುಂದು).

ಶ್ರೀ ಎಂ. ಪಿ. ಪ್ರಕಾಶ್ (ಹೂವಿನ ಹಡಗಲಿ) : ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾಗಿರತಕ್ಕಂಥ ವಿಷಯದಲ್ಲಿ ನಮ್ಮ ಸದನ ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದೆ. ಮಾನ್ಯ ರಾಷ್ಟ್ರಪತಿಗಳು ಈ ಜಂಟಿ ಅಧಿವೇಶನದಲ್ಲಿ ದಯಪಾಲಿಸಿದಂಥ ಅವರ ಹನ್ನೊಂದು ಸೂತ್ರಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ನಿರ್ಣಯವೇ ಒಂದು ಮಹತ್ತರವಾಗಿರತಕ್ಕಂಥ, ಶಾಸಕಾಂಗದ ವಿಧಿವಿಧಾನಗಳಲ್ಲಿ, ಒಂದು ಉತ್ತಮವಾದಂಥ ಹೆಜ್ಜೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಇಲ್ಲಿ ಮಾತನಾಡಿದ ವಿಚಾರದಲ್ಲಿ ಚರ್ಚೆ ಅಗತ್ಯವಿದೆಯೇ, ಎನ್ನುವ ವಿಚಾರದಲ್ಲಿ ತಮ್ಮ ವಿವೇಚನೆಗೆ ಮಾನ್ಯ ಮಾಧುಸ್ವಾಮಿಯವರು ಬಿಟ್ಟಿದ್ದರು. ಈಗಾಗಲೇ ನಾವೆಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು, ಈ ವಿಷಯವನ್ನು ಮಾತನಾಡಬೇಕು ಎಂದು ಪ್ರತಿಯೊಬ್ಬರೂ ಹೇಳಿದಂಥ ಸಂದರ್ಭದಲ್ಲಿ, ಇಂಥ ಒಂದು ಉತ್ತಮವಾದಂಥ ಸಲಹೆ ಬಂದಾಗ ಇಡೀ ಸದನ ಕರ್ನಾಟಕವನ್ನು ಒಂದು ಸಫಲವಾದ, ಸಮೃದ್ಧಿಯಾದ, ಸ್ವಾಭಿಮಾನದ ಒಂದು ರಾಜ್ಯವನ್ನಾಗಿ ಕಟ್ಟಬೇಕು ಎನ್ನುವ ಕಾರಣಕ್ಕಾಗಿಯೇ ಈ ಎಲ್ಲಾ ಸದಸ್ಯರೂ ಕೂಡ ಸುಮಾರು 5 ಕೋಟಿ 27 ಲಕ್ಷ ಜನತೆಯ ಭಾವನೆಯನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಅನೇಕರು ಉತ್ತಮವಾಗಿರತಕ್ಕಂಥ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಆದರೆ ಇಲ್ಲಿ ನಾವು ಪರಿಗಣಿಸಬೇಕಾದಂಥ ಅತ್ಯಂತ ಮುಖ್ಯವಾದ ಒಂದು ವಿಷಯ ಎಂದರೆ, ಅಭಿವೃದ್ಧಿಯ ಬಗ್ಗೆ ನಾವು ಒಂದು ಹೊಸ ವ್ಯಾಖ್ಯಾನವನ್ನು ಬರೆಯಬೇಕಾಗುತ್ತದೆ. ಈ ಅಭಿವೃದ್ಧಿ ಎನ್ನುವಂಥಾದ್ದು ಜನರಿಗೆ ಆಹಾರವಾಗಿ, ಆರೋಗ್ಯವಾಗಿ, ಆಶ್ರಯವಾಗಿ, ಅಕ್ಷರವಾಗಿ ಕರ್ನಾಟಕದ 5 ಕೋಟಿ 27 ಲಕ್ಷ ಜನರನ್ನು ಒಳಗೊಂಡಿದೆಯೇ, ಇಲ್ಲವೇ ಎನ್ನುವಂಥಾದ್ದನ್ನು ನಾವು ನೋಡಬೇಕಾಗುತ್ತದೆ. ಅದು ಮೊದಲು ಆಹಾರವಾಗಬೇಕು, ಆಶ್ರಯವಾಗಬೇಕು, ಆರೋಗ್ಯವಾಗಬೇಕು, ಅಕ್ಷರವಾಗಬೇಕು. ಇಷ್ಟು ಆದಾಗ ಮಾತ್ರ ಅಭಿವೃದ್ಧಿಎನ್ನುವಂಥಾದ್ದರ ಒಂದು ವ್ಯಾಖ್ಯಾನ ನಿಜವಾದಂಥ ಅರ್ಥದಲ್ಲಿ ನಮಗೆ ತಿಳಿಯಲಿಕ್ಕೆ ಸಾಧ್ಯತೆಯಾಗುತ್ತದೆ. ಅಭಿವೃದ್ಧಿ ಎನ್ನುವಂಥಾದ್ದು ಕೇವಲ ಒಂದು ಸೇವಾ ಕ್ಷೇತ್ರದಲ್ಲಿ ಸೀಮಿತವಾಗಿದ್ದು, ಅದರ ಮೂಲಕವಾಗಿ ನಗರೀಕರಣಕ್ಕೆ ಒಳಗಾಗಿರತಕ್ಕಂಥ ಕೆಲವು ಪ್ರದೇಶಗಳಿಗೆ ಅದರ ಲಾಭವನ್ನು ಪಡೆಯುವಂಥಾದ್ದು ಆಗಿದ್ದರೆ, 100ಕ್ಕೆ 40ಕ್ಕಿಂತಲೂ ಹೆಚ್ಚು ಜನ, ಅಂದರೆ ಸುಮಾರು 320 ದಶಲಕ್ಷ ಜನಗಳ ವಿಚಾರಗಳ